6) ವಯಸ್ಕರ ಶಿಕ್ಷಣ ಸಮಿತಿಯವರಿಂದ ಧರಣಿ

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಶಂಕರಲಿಂಗೇಗೌಡ ಹತ್ತಿರ ಹೋಗಿ ಮಾತನಾಡಿದೆ. ವಯಸ್ಕರ ಶಿಕ್ಷಣ ಸಮಿತಿಯವರು ಇಡೀ ರಾಜ್ಯಾದ್ಯಂತ್ಯ ಧರಣಿ ಮಾಡುತ್ತಿದ್ದಾರೆ. ಇವತ್ತು ಅವರ ಮನೆ ಮುಂದೆ ಧರಣಿ ಮಾಡುತ್ತಿದ್ದಾರೆ. ಅದನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರ ಮಾಡುವಂತೆ ಕೋರಿದ್ದಾರೆ. ಪಾಪ ಅವರು ಯಾವಾಗಲೂ ಮಾತನಾಡುವುದಿಲ್ಲ. ಇವತ್ತು ಕೊನೆ ದಿವಸ ಅಲ್ಲ ಅಂತ ಅವರು ಮಾತನಾಡುತ್ತಿದ್ದಾರೆ. ಅವರು ಒಂದು ಎರಡು ನಿಮಿಷ ಪ್ರಸ್ತಾಪ ಮಾಡಲಿ ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ಎಚ್.ಎನ್.ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ ವಯಸ್ಕರ ಶಿಕ್ಷಣ ಸಮಿತಿಯವರು ಸುಮಾರು 28 ವರ್ಷಗಳ ಕಾಲ ಅವಿರತವಾಗಿ ದುಡಿದು, ಅವರ ಬದುಕಿಗೆ ಯಾವ ರೀತಿಯು ನೆಲೆ ಇಲ್ಲದಂತೆ ಆಗಿದೆ ಅದನ್ನು ವೈಂಡ್ ಆಫ್ ಮಾಡುತ್ತೇವೆಂದು ಹೇಳಿದ್ದಾರೆ ಅದನ್ನು ಬಿಳಿ ಅನೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೇ ನಮ್ಮದು ಮಾತೃ ಭಾಷೆ ಕನ್ನಡ ಅಲ್ಲದೇ ಹೋದರೂ ಕೂಡ ಕನ್ನಡ ಭಾಷೆ ಸರಳವಾಗಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ನಾವು ಮಾತನಾಡುತ್ತೇವೆ. ನೀವು ಸ್ವತಹಃ ಹುಟ್ಟು ಮೈಸೂರಿನವರು. ಮಾತೃಭಾಷೆ ಕನ್ನಡ ತಾವು ಅಷ್ಟು ವೇಗವಾಗಿ ಮಾತನಾಡಿದರೆ ಇಲ್ಲಿ ಬರೆದುಕೊಳ್ಳುವುದು, ಹೇಗೆ ಅವರಿಗೆ ಅರ್ಥವಾಗವುದು ಹೇಗೆ?

ಶ್ರೀ ಎಚ್.ಎನ್.ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಸಮಯ ಕೊಡುತ್ತೀರೋ ಇಲ್ಲವೋ ಎನ್ನುವ ಭಯದಿಂದ.. ಬೇಗ ಮುಗಿಸೋಣ ಅಂತ.

ಅಧ್ಯಕ್ಷರು: ಇಲ್ಲ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸ್ವಾಮಿ ಕೋಲಾರ ಜಿಲ್ಲೆಯಲ್ಲಿ ಹಾವು ಕಚ್ಚಿದ್ದಕ್ಕೆ ಔಷಧಿ ಇಲ್ಲ, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಜಿ.ರಾಮದಾಸ್: ಧರಣಿ ಮೊದಲು ಅವರು ಮೈಸೂರಿನಲ್ಲಿ ಎಲ್ಲಾ ತಯಾರಿ ಮಾಡಿಕೊಂಡಿದ್ದಾರೆ. ನಾವು ಮೈಸೂರಿಗೆ ಹೋಗುವಷ್ಟರಲ್ಲಿ ಅನೇಕ ರೀತಿಯಾದ ಟೀಕೆಗಳಿಗೆ ಒಳಗಾಗುತ್ತೇವೆ. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸ ಮಾಡುವವರನ್ನು ಬೇರೆ ಇಲಾಖೆಗಳಲ್ಲಿ ಕೆಲಸಕ್ಕೆ ವಹಿಸುತ್ತೀರಾ ಹೇಗೆ ಈ ವಯಸ್ಕರ ಶಿಕ್ಷಣ ಇಲಾಖೆಯನ್ನು ಮುಚ್ಚಿತ್ತೀರಾ? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಡಿ.ಮಂಜುನಾಥ್ : ಮಾನ್ಯ ಗೋವಿಂದೇಗೌಡರು ಕೌನ್ಸಿಲ್‌ನಲ್ಲಿದ್ದಾರೆ. ಮತ್ತೇ ತಾವು ಏನು ಹೇಳಿದ್ದಿರಿ ಎಂದು ನಾನು ಕೇಳಿಸಿಕೊಳ್ಳಲಿಲ್ಲ. ತಾವು ಹೇಳಿದರೆ ನಾನೇ ಉತ್ತರ ಹೇಳುತ್ತೇನೆ.

ಶ್ರೀ ಜಿ.ರಾಮದಾಸ್ : ಅವರು ಸುಮಾರು 28 ವರ್ಷಗಳ ಕಾಲ ಸೇವೆ ಸಲ್ಲಿಸಿದರೂ ಕೂಡ ಇನ್ನು ಪರ್ಮನೆಂಟ್ ಆಗಿಲ್ಲ. ಅದು ಬಿಳಿ ಆನೆ ಆಗಿದೆ ಅಂತ

ಹೇಳಿ ಅದನ್ನು ವೈಂಡ್ ಆಫ್ ಮಾಡಬೇಕೆಂದು ಸರ್ಕಾರ ಹೇಳಿದೆ. ಅದರ ಬಗ್ಗೆ ರಾಜ್ಯಾದ್ಯಂತ ಎಲ್ಲರೂ ಮುಷ್ಕರ ಮಾಡುತ್ತಿದ್ದಾರೆ. ಈಗ ಅವರು ಶಾಸಕರ ಮನೆಯ ಮುಂದೆ ಮುಷ್ಕರ ಹೂಡುವಂತಾದ್ದು, ಅನಿವಾರ್ಯವಾಗಿದೆ ಅಂತ ಹೇಳಿ ಶಾಸಕರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಗಳನ್ನು ಮುಂದುವರಿಸಿ ಅವರ ಕೆಲಸವನ್ನು ಖಾಯಂ ಮಾಡುತ್ತೀರೋ ಅಥವಾ ಅವರನ್ನು ಬೇರೆ ಇಲಾಖೆ ಕೆಲಸಗಳಲ್ಲಿ ತೆಗೆದುಕೊಳ್ಳುತ್ತೀರೋ ಈ ವಯಸ್ಕರ ಶಿಕ್ಷಣ ಸಮಿತಿಗಳನ್ನು ರದ್ದು ಮಾಡುತ್ತೀರಾ? ಈ ಬಗ್ಗೆ ಉತ್ತರ ಬೇಕು.

ಶ್ರೀ ಡಿ.ಮಂಜುನಾಥ್ : ಮಾನ್ಯ ಅಧ್ಯಕ್ಷರೇ ನೌಕರರ ಸಮಸ್ಯೆ ಬೇರೆ ಅದನ್ನು ಮುಚ್ಚುವುದೋ ಬಿಡುವುದು ಆ ಸಮಸ್ಯೆ ಬೇರೆ. ತಾವು ನೌಕರರ ಬಗ್ಗೆ ಹೇಳುತ್ತಿದೀರಿ ಸಂಬಂಧಪಟ್ಟವರನ್ನು ಕರೆಯಿಸಿ ಮಾತನಾಡುತ್ತೇನೆ.

ಶ್ರೀ ಜಿ.ರಾಮದಾಸ್: ಮಾನ್ಯ ಅಧ್ಯಕ್ಷರೇ ಸರ್ಕಾರದಿಂದ ಗೊಂದಲಮಯ ವಾದಂತಹ ಉತ್ತರ ಬಂದಿದೆ. ವಯಸ್ಕರ ಶಿಕ್ಷಣ ಸಮಿತಿಗಳನ್ನು ಮುಚ್ಚುವುದಾದರೆ ಮುಚ್ಚುಬಿಡಿ. ಸರ್ಕಾರ ಅದರ ಬಗ್ಗೆ ಗಮನಹರಿಸಿಲ್ಲ. ಒಬ್ಬ ಐ.ಎ.ಎಸ್. ಅಧಿಕಾರಿ ಸರ್ಕಾರದ ವಿರುದ್ಧವಾಗಿ ಧರಣಿ ಕುಳಿತುಕೊಂಡಿದ್ದಾರೆ.

ಅಧ್ಯಕ್ಷರು : ರಾಮದಾಸ್ ತಾವು ಈ ರೀತಿ ಮಾತನಾಡುತ್ತಾ ಹೋದರೆ, ಶಿಸ್ತು ಇಲ್ಲ ಏನೂ ಇಲ್ಲ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ? ಡಾಕ್ಟರ್ ಮಹದೇವ್ ತಾವು ಉತ್ತರ ಕೊಡಿ.

ಡಾ॥ ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಹಾವು ಕಡಿತದಿಂದ ಜನತೆಗೆ ಆಗಿರತಕ್ಕಂಥ ಅನಾನುಕೂಲತೆ ಮತ್ತು ತೊಂದರೆಯನ್ನು ನಿವಾರಣೆ ಮಾಡಲಿಕ್ಕೆ ಸ್ನೇಕ್ ವಿನೊಮ್ ಅನ್ನು ಸರಬರಾಜು ಮಾಡುವ ಬಗ್ಗೆ ಪರಿಶೀಲನೆ ಮಾಡಿ ಕ್ರಮ-ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ.ರಾಮರೆಡ್ಡಿ : ತಾವು ಪರಿಶೀಲಿಸುವುದು ಅಲ್ಲ ಔಷಧಿ ಬೇಕು. ಅಪಾಯಕಾರಿ ಅದು.

ಅಧ್ಯಕ್ಷರು : ಪರಿಶೀಲನೆ ಅಂದರೆ ಹೌದು ಈಗ ಏನು ಮಾಡಬೇಕು ತಾವು ಸಡನ್ ಆಗಿ ರೈಜ್ ಮಾಡಿದ್ದೀರಿ. ತಕ್ಷಣ ಔಷಧಿ ಕೊಡುವುದಕ್ಕೆ ಅವರೇನು ಸರ್ವಜ್ಞರೇ? ಅದಕ್ಕೆ ಅವರು ಹೋಗಿ ಅಧಿಕಾರಿಗಳ ಜೊತೆ ಮಾತನಾಡಿ ಯಾವ ಔಷಧಿ ಬೇಕು ಎಷ್ಟು ಸಪ್ಲೈ ಮಾಡಬೇಕು ಎಂದು ಆಲೋಚನೆ ಮಾಡಬೇಡವೇ. ಈಗ ಇಲ್ಲಿ ನಿಮ್ಮ ಕೈಯಲ್ಲಿ ಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ. . . .

ಅಧ್ಯಕ್ಷರು : ನೀರಾವರಿ ಬಗ್ಗೆ ಹೇಳಲಿ, ಅದನ್ನು ಕವರ್ ಮಾಡಿಸಿದರೇ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಸಬ್ಜೆಕ್ಟೇ ಬೇರೆ ಆಗಿದೆ. ಆ 7 ಟಿಎಂಸಿಎಫ್‌ಟಿ ನೀರನ್ನು ಬೇರೆಯವರಿಗೆ ಬಿಟ್ಟಿದ್ದಕ್ಕಾಗಿ, ಅಲ್ಲಿ ಸುಮಾರು

100 ಕೋಟಿ ರೂಪಾಯಿಗಳಷ್ಟು ಸ್ಕ್ಯಾಂಡಿಂಗ್ ಕ್ರಾಪ್ಸ್ ಹಾಳಾಗುತ್ತಿದೆ. ಅದರ ಬಗ್ಗೆ ಅವರು ಪ್ರಸ್ತಾಪ ಮಾಡಬೇಕೆಂದಿದ್ದಾರೆ, ಅದಕ್ಕಾಗಿ 5 ನಿಮಿಷ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ, ಹಾವು ಆಯಿತು, ಚೇಳು ಆಯಿತು, ಸರಿ ಆಯಿತು ಅವರು ರೈತರ ಸಮಸ್ಯೆ ಬಗ್ಗೆ 5 ನಿಮಿಷ ಮಾತನಾಡುತ್ತಾರೆ.

ಅಧ್ಯಕ್ಷರು : ಪ್ರಸ್ತಾಪ ಮಾಡಬಾರದು ಅಂತಲ್ಲ, ಇರಿಗೇಷನ್ ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ಹೇಗಿದ್ದರೂ ಚೀಫ್ ಮಿನಿಸ್ಟರ್ ರಿಪ್ಲೈ ಕೊಡಬೇಕು, ಆಗ ಕಾಂಪ್ರಹೆನ್ಸೀವ್ ಆಗಿ ಅದನ್ನೂ ಸೇರಿಸಿ ಉತ್ತರ ಕೊಡುತ್ತಾರೆ. ಪ್ರತ್ಯೇಕವಾಗಿ ಹೇಳುವುದು ಬೇಡ ಅಂತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ನಾವೂ ಒಪ್ಪಿಕೊಳ್ಳುತ್ತೇವೆ, ಆದರೆ ಇದಕ್ಕಿಂತಲೂ ಮುಂಚೆ ಪ್ರಸ್ತಾಪ ಮಾಡಿದಾಗಲೂ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ 8ನೇ ತಾರೀಖಿನ ನಂತರ ನೀರು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಸತ್ಯಾಗ್ರಹ ಮಾಡಿದ ಮೇಲೆ, ಠಸ್ತೆ ರೋಕೋ ಮಾಡಿದ ಮೇಲೆ, ಹೌಸಿಂಗ್ ಮಿನಿಸ್ಟರ್‌ರವರು ಟೆಲಿಫೋನ್ ಮಾಡಿ ಪ್ರತಿ ದಿವಸ 3,500 ಕ್ಯೂಸೆಕ್ಸ್ ನೀರು ಬಿಡುವುದಕ್ಕೆ ಹೇಳಿಸುತ್ತೇನೆಂದು ಹೇಳಿದರು. ಆದರೆ, ಅಲ್ಲಿ ನೀರು ಬಿಡಲಿಲ್ಲ. ಆದ್ದರಿಂದ, ಅಲ್ಲಿಗೆ ಯಾವ ಶಾಸಕರೂ ಹೋಗುವ ಹಾಗಿಲ್ಲ. ಅಲ್ಲಿಗೆ ಸರ್ಕಾರದವರು ಯಾರಾದರೂ ಹೋದರೆ ಲಾ ಅಂಡ್ ಆರ್ಡರ್ ಪರಿಸ್ಥಿತಿ ಉಂಟಾಗುವ ಸ್ಥಿತಿಯಲ್ಲಿದೆ. ಆದ್ದರಿಂದ ಇದರ ಬಗ್ಗೆ ವಿಶೇಷವಾಗಿ ಚಿಂತನೆ ಮಾಡುವುದಕ್ಕೆ ಸಾಧ್ಯವಿದ್ದರೆ ಹೇಳಲಿ, ಲಾಸ್ಟ್ ಟೈಮ್‌ನಲ್ಲಿ ಕಾಲಿಂಗ್ ಅಟೆನ್‌ಷನ್ ಮೇಲೆ ಚರ್ಚೆ ನಡೆದಂಥ ಸಂದರ್ಭದಲ್ಲಿ ನೀರು ಬಿಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಈಗ ಅಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ವಿವರಣೆ ಕೊಡುವುದರ ಮೂಲಕ ಹೇಳಲಿ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

I. ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಮಂತ್ರಿ) ಅವರು :

1957ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ 9(2) ನೇ ಕಲಮಿನ ಮೇರೆಗೆ ;

ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು, ಘಟನಟ್ಟಿಯ ಶ್ರೀ ಶಿವಯೋಗಿ ಕೃಷಿ ಅಭಿವೃದ್ಧಿ ಸಂಘವು ಪಿ.ಎಲ್.ಡಿ. ಬ್ಯಾಂಕ್, ಅಥಣಿಯಲ್ಲಿ ಏತ ನೀರಾವರಿಗೆ ರೂ.12.00 ಲಕ್ಷ ಸಾಲ ಪಡೆಯಲು ಬರೆದುಕೊಡುವ ಪತ್ರಕ್ಕೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 24.3.95 ರಂದು ಹೊರಡಿಸಲಾದ ಆರ್‌ಡಿ 258 ಇಎಸ್‌ಆರ್ 94ನೇ ಕ್ರಮಾಂಕದ ಅಧಿವೇಶನವನ್ನು ಮಂಡಿಸುತ್ತೇನೆ.

II. ಶ್ರೀ ಸಿ.ಭೈರೇಗೌಡ (ಕೃಷಿ ಮಂತ್ರಿ) : ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮಂತ್ರಿ) : ಅವರ ಪರವಾಗಿ ಮಾನ್ಯ ಅಧ್ಯಕ್ಷರೆ; 1994 ನೇ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 311 ನೇ ಕಲಮಿನ ಮೇರೆಗೆ;